ಶ್ರೀ ನಂಜಯ್ಯ ಮಾತ್.—ನೀರು ಕೊಡುವುದಕ್ಕಾಗದಿದ್ದರೆ ಅವರಿಗೆ ಏನಾದರೂ ಪರಿಹಾರ ಕೊಡುವುದಕ್ಕೆ ಪ್ರಯತ್ನ ಮಾಡಬೇಕು. ನಮ್ಮದು ಬರಗಾಲ ಜಿಲ್ಲೆ. ೪೦೦ ಎಕರೆಯಲ್ಲಿ ಶೇಂಗಾ ಹಾಕಿದವರಿಗೆ ಏನಾದರೂ ಪರಿಹಾರ ಕೊಟ್ಟರೆ ಮಾತ್ರ ಬದುಕುವುದಕ್ಕೆ ಸಾಧ್ಯವಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಶೇಂಗಾ ಹಾಕುವುದಕ್ಕೆ ನಾವೇನು ಅವರಿಗೆ ತಿಳಿಸಿಲ್ಲ, ನೀವೇ ಬೆಳೆ ಇಟ್ಟುಕೊಳ್ಳಿ ಎಂದೇನು ಹೇಳಿಲ್ಲ. ಅವರು ತಮ್ಮ ಸ್ವಂತ ಹೊಣೆಗಾರಿಕೆಯಿಂದ ಎರಡನೇ ಬೆಳೆಯನ್ನು ಇಟ್ಟುಕೊಂಡಿರುವುದಕ್ಕೆ ನೀರು ಸಿಗದೆ ಇದ್ದರೆ ಪರಿಹಾರ ಕೊಡಲಿಕ್ಕೆ ಸಾಧ್ಯವಿಲ್ಲ

ಶ್ರೀ ನಂಜಯ್ಯ ಮಾತ್.—ಕುಡಿಯುವ ನೀರಿನ ವ್ಯವಸ್ಥೆಯನ್ನಾದರೂ ಮಾಡಿ.

ಅಧ್ಯಕ್ಷರು.—ಆ ಬಗ್ಗೆ ಮತ್ತೆ ಹೆಚ್ಚಿಗೆ ಪ್ರಸ್ತಾಪ ಮಾಡುವುದಕ್ಕೆ ಇಲ್ಲಿ ನಿಯಮಾವಳಿ ಪ್ರಕಾರ ಅವಕಾಶ ಇಲ್ಲ. ನೀವು ಬೇಕಾದರೆ ಅವರ ಛೇಂಬರಿಗೆ ಹೋಗಿ ಚರ್ಚೆ ಮಾಡಿ.

೨) ಕಾರವಾರ ಜಿಲ್ಲೆಯಂ ಸಿರಸಿ ತಾಲ್ಲೂಕಿನಲ್ಲಿ ಅರಣ್ಯಾಧಿಕಾರಿಗಳಂ ಬಡ ರೈತರಿಗೆ ಉರುವಲಂ ಕಟ್ಟಿಗೆ ಇತ್ಯಾದಿ ಬಗ್ಗೆ ಕಿರುಕುಳ ಕೊಡಂತ್ತಿರುವುದಂ,

ಶ್ರೀ ಜಿ. ಎಂ. ಕಾನಡೆ.—ಸಿರಸಿಯಲ್ಲಿ ಶ್ರೀ ಚಂದ್ರಪಾಂಡೆ ಎಂಬ ಅರಣ್ಯಾಧಿಕಾರಿಯನ್ನು ಹಾಕಿದ್ದೀರಿ. ನಮ್ಮಲ್ಲಿ ರೈತರು ಬಹಳ ಮಂದಿ ಇದ್ದಾರೆ. ಅವರಲೆ ಬಡವರೇ ಆಗಿದ್ದಾರೆ. ನಿಮ್ಮ ಕಡೆ ದನಗಳು ಗದ್ದೆ ತಿನ್ನುವುದಿಲ್ಲ, ನಮ್ಮ ಕಡೆ ತಿನ್ನುತ್ತವೆ. ಅವನ್ನು ತಡೆಗಟ್ಟಲಿಕ್ಕೆ ಮುಳ್ಳು ಬೇಲಿ ಕಟ್ಟುತ್ತಾರೆ. ಆ ಬೇಲಿಗೆ ಬೇಕಾದ ಮುಳ್ಳನ್ನು ಕಡಿಯುವುದಕ್ಕೆ ಸಹ ನಿಮ್ಮ ಅರಣ್ಯ ಅಧಿಕಾರಿಗಳು ಬಿಡುತ್ತಿಲ್ಲ. ಒಂದು ಪಕ್ಷ ಕಡಿದರೆ ತಕ್ಷಣ ಪೋಲೀಸ್ ಠಾಣೆಗೆ ಕರೆದುಕೊಂಡು ಹೋಗಿ ಹೊಡೆಸುತ್ತಾರೆ ಯಾರೇ ಆಗಲಿ ಕತ್ತಿ ತೆಗೆದುಕೊಂಡು ಜಮೀನು ಹತ್ತಿರ ಹೋದರೆ ಸಾಕು ಹಿಡಿದು ಹೊಡೆಯುತ್ತಾರೆ, ಈ ರೀತಿ ೬-೮ ಕೇಸುಗಳಾಗಿವೆ. ನೀವು ಅರಣ್ಯವನ್ನು ಕಡಿಯಂ ಬಾರದೆಂದು ಹೇಳುವುದನ್ನು ನಾನು ಒಪ್ಪುತ್ತೇನೆ. ಆದರೆ ಒಣಗಿದ ಮುಳ್ಳುಗಳನ್ನು ತಂದು ಬೇಲಿಗೆ ಹಾಕಲಿಕ್ಕೆ ಹೋದಾಗ ಹೊಡೆಯುವುದು ಸರಿಯಲ್ಲ. ಹುಬ್ಬಳ್ಳಿ ಸಮೀಪದಲ್ಲಿ ಸಣ್ಣಕೆರೆ ಎಂಬ ಊರು ಇದೆ ಆ ಊರಿಗೆ ಅರಣ್ಯದಿಂದ.....

ಅಧ್ಯಕ್ಷರು.—ಸಂಕ್ಷಿಪ್ತವಾಗಿ ಹೇಳಿ, ಬೇಗ ಮುಗಿಸಿ,

ಶ್ರೀ ಜಿ. ಎಂ. ಕಾನಡೆ.—ಬಡವರ ಸಮಸ್ಯೆಗಳು ಬಹಳ ಇವೆ. ಈ ರೀತಿ ಅರ್ಜೆಂಟ್ ಮಾಡಿದರೆ ಕುಳಿತುಕೊಳ್ಳುತ್ತೇನೆ ನೀವು ಗಡಿಬಿಡಿ ಮಾಡಿದರೆ ಆಗುವುದಿಲ್ಲ.

ಅಧ್ಯಕ್ಷರು.—ನೀವು ರೂಲ್ ೨೩ಳಿರ ಕೆಳಗೆ ವಿಚಾರವನ್ನು ಎತ್ತುವುದು ಅಷ್ಟೆ ಅದಕ್ಕೆ ಮಂತ್ರಿಗಳು ಉತ್ತರಿಸುತ್ತಾರೆ.

ಶ್ರೀ ಜಿ. ಎಂ. ಕಾನಡೆ.—ಹುಬ್ಬಳ್ಳಿಯಿಂದ ಸಣ್ಣಕೆರೆಗೆ ಹೋಗಬೇಕಾದರೆ ಜಂಗಲ್‌ನಲ್ಲಿ ೨೪ ಅಡಿ ಆಗಲದ ೬ ಕಿಲೋಮೀಟರ್ ರಸ್ತೆಯನ್ನು ಮಾಡಿದ್ದಾರೆ. ಆ ಊರಿಗೆ ಹೋಗಬೇಕಾದರೆ ಮರಗಳ ಬುಡ ಮಾತ್ರ ಇದೆ, ಮೇಲಿನದು ಎಲ್ಲಿ ಹೋಗಿದೆ ಎಂದು ಗೊತ್ತಿಲ್ಲ. ಎರಡನೆಯದಾಗಿ ನಮ್ಮಲ್ಲಿ ಕಲ್ಲನ್ನು ನೆಲದಿಂದ ಕಡಿದು ತೆಗೆದು ಮನೆ ಕಟ್ಟುತ್ತಾರೆ. ಆ ಕಲ್ಲನ್ನು ಕಡಿಯುವುದಕ್ಕೆ ಮೂರು ತಿಂಗಳ ಹಿಂದೆ ಅರ್ಜಿ ಕೊಟ್ಟರೆ ಅವರಿಗೆ ಕಲ್ಲು ಕಡಿಯುವುದಕ್ಕೆ ಲೈಸೆನ್ಸ್ ಕೊಡುವುದಿಲ್ಲ. ನಂತರ ದುಡ್ಡು ಕೊಟ್ಟವರಿಗೆ ಕೊಡುತ್ತಾರೆ ಇತ್ತೀಚೆಗೆ ದುಡ್ಡು ತುಂಬದ ಚಲನ್ ಕೂಡ ಇದೆ. ಒಂದು ನಾಟವನ್ನು ಸಿದ್ಧವಾಗುವುದವರಿಗೆ ಹನ್ನೆರಡೂವರೆ ಸಾವಿರ ರೂಪಾಯಿಗಳಿಗೆ ಕೊಟ್ಟಿದ್ದಾರೆ. ಅದಕ್ಕೆ ಇಪ್ಪತ್ತೆರಡೂವರೆ ಸಾವಿರ ರೂಪಾಯಿ ಬೇಡಿಕೆ ಇದ್ದರೂ ಅಷ್ಟು ಕಡಿಮೆ ಬೆಲೆಗೆ ಕೊಟ್ಟಿದ್ದಾರೆ. ಅದೇ ನಾಟವನ್ನು ಅವರು ಬೇರೆ ಊರಿನವರಿಗೆ ೨೫ ಸಾವಿರ ರೂಪಾಯಿಗಳಿಗೆ ಮಾರಿದ್ದಾರೆ. ೬ ಸಾವಿರ ರೂಪಾಯಿಗಳನ್ನು.....

ಅಧ್ಯಕ್ಷರು.—ಭಾಷಣವನ್ನೇ ಶುರು ಮಾಡಿದ್ದೀರಿ. ವಿಚಾರವನ್ನು ಪ್ರಸ್ತಾಪಿಸಿ. ಈ ರೀತಿ ನೀವು ಮಾತನಾಡುತ್ತಾ ಹೋದರೆ ಇಡೀ ಒಂದು ದಿವಸ ಆಗುತ್ತದೆ.

ಶ್ರೀ ಜಿ. ಎಂ. ಕಾನಡೆ.—ಈ ರೀತಿ ಗಡಿಬಿಡಿ ಮಾಡಿದರೆ ಬಹಳ ತೊಂದರೆಯಾಗುತ್ತದೆ. ನಮಗೆ ಓಟು ಕೊಟ್ಟ ಬಡವರ ಸಮಸ್ಯೆಗಳನ್ನು ಇಡುತ್ತಿದ್ದೇನೆ.

ಅಧ್ಯಕ್ಷರು—ನೀವು ಕೊಟ್ಟಿರುವ ಸೂಚನೆ ಪ್ರಕಾರ ಕಾರವಾರ ಜಿಲ್ಲೆಯ ಸಿರಸಿ ತಾಲ್ಲೂಕಿನ ಅರಣ್ಯಾಧಿಕಾರಿ ಬಡರೈತರಿಗೆ ಉಮುವಲು ಕಟ್ಟಿಗೆ, ಹಸಿರು ಸೊಪ್ಪು ಮತ್ತು ಬೇಲಿ ಮುಳ್ಳು ಉಚಿತವಾಗಿ ಕೊಡಲು ಚಿತ್ರಹಿಂಸೆ ಕೊಡುವ ಬಗ್ಗೆ ಅಂಥ ಹೇಳಿದ್ದೀರಿ. ಅದಕ್ಕೆ ಉತ್ತರಿಸುತ್ತಾರೆ ಮಂತ್ರಿಗಳು.

ಶ್ರೀ ಜಿ. ಎಂ. ಕಾನಡೆ.—ಇನ್ನೂ ಇದೆ. ಅಷ್ಟನ್ನೇ ಹೇಳಿದರೆ ಆಗುವುದಿಲ್ಲ. ಬಡವರಿಗೆ ರಕ್ಷಣೆ ಕೊಡಿ ಎಂದು ಕೇಳುವುದು ನಮ್ಮ ಕರ್ತವ್ಯ.

ಅಧ್ಯಕ್ಷರು—ಕಾನಡೆಯವರೇ ದಯವಿಟ್ಟು ಕೂರಿ.

ಶ್ರೀ ಜಿ. ಎಂ ಕಾನಡೆ.—ಇಲ್ಲ, ಅಧ್ಯಕ್ಷರೆ, ಪೂರ್ತಿ ಹೇಳಿ ಮುಂಗಿಸುತ್ತೇನೆ.

ಅಧ್ಯಕ್ಷರು—ಈ ರೀತಿ ಮಾಡುವುದು ಸರಿಯಲ್ಲ. ನೀವು ಗಂಟೆ ಗಟ್ಟಲೆ ಭಾಷಣ ಮಾಡಿದರೆ ಹೇಗೆ? ಬಂಗಾರಪ್ಪನವರೆ, ಸಿಸಿಳರ ನಿಯಮದ ಬಗ್ಗೆ ಅವರಿಗೆ ಸ್ವಲ್ಪ ಹೇಳಿ.

ಶ್ರೀ ಜಿ. ಎಂ. ಕಾನಡೆ.—ನಾನು ಒಬ್ಬ ಹಳೇ ಶಾಸಕನೆ. ೨ನೇ ಬಾರಿ ಆರಿಸಿಬಂದಿದ್ದೇನೆ ಅದು ಖನಗೆ ಗೊತ್ತಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ರೂಲ್ ಸಿಸಿಳರೊಳಗೆ ಅನೇಕ ಮಹತ್ವದ ವಿಚಾರಗಳನ್ನು ಸದಸ್ಯರು ಎತ್ತಬೇಕು. ಅದನ್ನು ಹತ್ತಿಪ್ಪತ್ತು ನಿಮಿಷ ತೆಗೆದುಕೊಂಡು ಹೇಳುವುದಕ್ಕಾಗುವುದಿಲ್ಲ. ಒಂದೆರಡು ನಿಮಿಷಗಳಲ್ಲಿ ವಿಚಾರವನ್ನು ಎತ್ತಬೇಕು. ಅದಕ್ಕೆ ಸರ್ಕಾರ ಉತ್ತರಿಸುತ್ತದೆ. ನಿಮಗೆ ವಿವರವಾದ ಉತ್ತರ ಬೇಕಾದರೆ, ಮತ್ತು ವಿವರವಾಗಿ ಪ್ರಸ್ತಾಪ ಮಾಡಬೇಕಾದರೆ ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಬಹುದು. ಅಥವಾ ಬೇರೆ ಬೇರೆ ನಿಯಮಗಳ ಮೇಲೆ ಕೇಳಬಹುದು. ರೂಲ್ ಸಿಸಿಳ ರನ್ವಯ ಪ್ರಶ್ನೆ ಕೇಳಲು ಪ್ರತಿಯೊಬ್ಬ ಶಾಸಕರಿಗೂ ಅವಕಾಶ ಸಿಗಬೇಕಾಗಿರುವುದರಿಂದ ಒಂದೆರಡು ನಿಮಿಷಗಳಲ್ಲಿ ವಿಚಾರವನ್ನು ಪ್ರಸ್ತಾಪಿಸಬೇಕಾಗುತ್ತದೆ. ಒಬ್ಬ ಸದಸ್ಯರೇ ೧೦–೧೫ ನಿಮಿಷ ಕಾಲವನ್ನು ಉಪಯೋಗಿಸಿಕೊಳ್ಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ಇವತ್ತು ಈ ನಿಯಮದನ್ವಯ ೨೧ ಜನ ಸದಸ್ಯರು ಪ್ರಶ್ನೆ ಕೇಳುವವರಿದ್ದಾರೆ.

ಶ್ರೀ ಜಿ. ಎಂ. ಕಾನಡೆ.—ಇದು ೫ ನಿಮಿಷಕ್ಕೆ ಆಗುವ ಕೆಲಸ ಅಲ್ಲ. ಆದ್ದರಿಂದ ಈ ರೂಲನ್ನು ತಿದ್ದುಪಡಿ ಮಾಡಬೇಕಾಗುತ್ತದೆ.

ಅಧ್ಯಕ್ಷರು—ಮಾಡಬಹುದು. ನಿಮ್ಮ ಹತ್ತಿರವೇ ಅಧಿಕಾರ ಇದೆ.

ಅಧ್ಯಕ್ಷರು.—ರೂಲ್ ತಿದ್ದುಪಡಿ ಮಾಡಬೇಕಾಗುತ್ತದೆ.

ಶ್ರೀ ಜಿ. ಎಮ್. ಕಾನಡೆ,—ಮಾಡಲೇ ಬೇಕು, ಅದಕ್ಕೆ ಕಾನೂನು ಇದೆ.

ಅಧ್ಯಕ್ಷರು.—ನೀವು ದಯವಿಟ್ಟು ಕುಳಿತುಕೊಳಿ.

ಶ್ರೀ ಜಿ. ಎಮ್. ಕಾನಡೆ.—ಇಲ್ಲ. ಇದು ಬಹಳ ಮುಖ್ಯವಾದ ವಿಚಾರ, ಇದೆ. ಜಂಗಲ್ ವಿಚಾರ ಇದೆ.

ಅಧ್ಯಕ್ಷರು.—೨೧ ಮಾನ್ಯ ಸದಸ್ಯರು ಸಿಸಿಳ ಕೆಳಗೆ ನೋಟೀಸ್ ಕೊಟ್ಟಿದ್ದಾರೆ. ಎಲ್ಲ ಸದಸ್ಯರಿಗೂ ಕೂಡ ಅವಕಾಶ ಕೊಡಬೇಕಾಗಿದೆ.

ಶ್ರೀ ಜಿ. ಎಮ್. ಕಾನಡೆ.—ನಾನು ಕ್ಷೇತ್ರದಿಂದ ಬಂದಿರತಕ್ಕವನ್ನು, ನನಗೆ ಮಾತನಾಡಲು ಅವಕಾಶ ಕೂಡಿ.

ಅಧ್ಯಕ್ಷರು.—ಕಾನೂನು ಪ್ರಕಾರ ಈಗ ನಿಮಗೆ ಅವಕಾಶ ಕೊಡಲು ಸಾಧ್ಯವಿಲ್ಲ. ಬೇಕಾದರೆ ನೀವು ಪ್ರಶ್ನೆ ಹಾಕಿ, ಜನರಲ್ ಡಿಸ್‌ಕಷನ್ ಇದೆ, ಹಾಫ್ ಅನ್ ಅವರ್ ಡಿಸ್‌ಕಷನ್ ಇದೆ, ಬಡ್ಜೆಟ್ ಮೇಲೆ ಭಾಷಣ ಇದೆ. ಅವುಗಳಲ್ಲಿ ಯಾವುದಾದರೂ ಸಂದರ್ಭವನ್ನು ನೀವು ಉಪಯೋಗಿಸಿಕೊಳ್ಳಬಹುದು.

ಶ್ರೀ ಜಿ. ಎಮ್. ಕಾನಡೆ.—ಬಡವರ ಕಷ್ಟವನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ. ನನ್ನ ಕಷ್ಟ ಅಲ್ಲ, ಬಡವರದ್ದು, ೨೦೦ ಎಕರೆ ಜಂಗಲ್‌ಗೆ ಬೆಂಕಿ ಹಚ್ಚಿ ಎಲ್ಲ ಸುಟ್ಟು ಹೋಗಿದೆ. ಶ್ರೀ ಪಾಂಡೆ,

ಯವರೆಂ ಅಲ್ಲಿ ಬಹಳ ತೊಂದರೆ ಕೊಡುತ್ತಿದ್ದಾರೆ. ಇಡೀ ಜಂಗಲ್ ಲೂಟಿ ಆದರೂ ಕೂಡ ಏನು ಕ್ರಮ ತೆಗೆದುಕೊಳ್ಳುತ್ತಿಲ್ಲ. ಬಡವರಾದ ರೈತರನ್ನು ಹೊಡೆದು ಹಿಂಸಿಸಿ ಹಣ ವಸೂಲು ಮಾಡಿ ಬಹಳ ತೊಂದರೆ ಕೊಡುತ್ತಿದ್ದಾರೆ.

ಅಧ್ಯಕ್ಷರು —ಅರ್ಧ ಗಂಟೆ ಭಾಷಣ ಮಾಡಿದರೆ ಹೇಗೆ ? ನಾಳೆ ಜನರಲ್ ಡಿಸ್‌ಕಷನ್ ನಲ್ಲಿ ಬೇಕಾದಷ್ಟು ಅವಕಾಶ ಇದೆ. ದಯವಿಟ್ಟು ಕುಳಿತುಕೊಳ್ಳಿ

ಶ್ರೀ ಜಿ. ಎಮ್. ಕಾನಡೆ.—ನನ್ನ ಒಂದೇ ಒಂದು ಮನವಿ ಏನೆಂದರೆ, ಶ್ರೀ ಪಾಂಡೆ ಅವರಿಂದ ಬಹಳ ಅನ್ಯಾಯವಾಗುತ್ತಿದೆ. ಅವರನ್ನು ಕೂಡಲೇ ವರ್ಗ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅವರು ಹೇಳುವುದರಲ್ಲಿ ಸತ್ಯಾಂಶ ಇದ್ದರೆ, ದಯವಿಟ್ಟು ತನಿಖೆ ಮಾಡಿ.

ಶ್ರೀ ಜೀವಿಜಯ.—ಸಿಸ್ಸಿ ಅರಣ್ಯಾಧಿಕಾರಿಗಳು ಅಲ್ಲಿನ ಬಡ ರೈತರಿಗೆ ಉರುವಲು ಕಟ್ಟಿಗೆ, ಹಸಿರು ಸೊಪ್ಪು ಮತ್ತು ಬೇಲಿ ಮುಳ್ಳು ಉಪಯೋಗಿಸದಂತೆ ತಡೆದು ಚಿತ್ರಹಿಂಸೆ ಕೊಡುವುದರ ಬಗ್ಗೆ— ಶ್ರೀ ಕಾನಡೆಯವರು ನೋಟೀಸ್ ಕೊಟ್ಟಿದ್ದಾರೆ. ಅದಕ್ಕೆ ನನ್ನ ಉತ್ತರ ಈ ರೀತಿ ಇದೆ.

ಸಿಸ್ಸಿ ಟೌನ್ಷಿನಲ್ಲಿ ನಾಗರಿಕರು ಉರುವಲು ಕಟ್ಟಿಗೆ,ಹಸಿರು ಎಲೆ ಮತ್ತು ಬೇಲಿಯ ಮುಳ್ಳುಗಳನ್ನು ತರಲು ಉಪ ಅರಣ್ಯ ಸಂರಕ್ಷಣಾಧಿಕಾರಿ,ಸಿಸ್ಸಿ ಇವರು ಕಿರುಕುಳ ಕೊಡುತ್ತಿರುವ ಪ್ರಸ್ತಾವನೆ ಸರಿಯಲ್ಲ. ಪ್ರತಿ ವರ್ಷವೂ ಸಿಸ್ಸಿಯ ಸುತ್ತ ಮುತ್ತಲ ಕಾಡುಗಳಿಂದ ೬೦೦ ಟನ್‌ಗಳಷ್ಟು ಒಣಗಿದ ಉರುವಲು ಕಟ್ಟಿಗೆ, ೨೦೦ ಗಾಡಿಗಳಷ್ಟು ಮುಳ್ಳು ಬೇಲಿ ಮತ್ತು ೪೦೦ ಗಾಡಿಗಳಷ್ಟು ಹಸಿರು ಎಲೆಗಳನ್ನು ತರಲಾಗುತ್ತಿದೆ. ಸಿಸ್ಸಿಯ ನಾಗರೀಕರಿಗೆ ಸಸಿಗಳನ್ನು ಕಡಿಯದುಂತೆ ಮತ್ತು ನಾಟಾದ ಸರಳುಗಳನ್ನು ಕಾಡಿನಿಂದ ತಂದಂ ಟೌನಿನಲ್ಲಿ ಮಾರದಂತೆ ತಿಳುವಳಿಕೆ ನೀಡಲಾಗಿದೆ. ಹೀಗಿದ್ದರೂ ಸಹ ಕೆಲವರು ಕಾಡಿನಿಂದ ಈ ತರಹದ ವಸ್ತುಗಳನ್ನು ಸಾಗಿಸಿ ತಂದು ಸಿಸ್ಸಿಯ ಮಾರುಕಟ್ಟೆಯಲ್ಲಿ ಮಾರುವುದು ಕಂಡು ಬಂದಿದೆ. ಅಂತಹ ಪ್ರಕರಣಗಳಲ್ಲಿ ಇಲಾಖೆಯವರು ತಕ್ಷಣ ತ್ವರಿತಕ್ರಮಕೈಗೊಂಡಿದ್ದಾರೆ. ಕಳೆದ ಒಂದು ವರ್ಷದಲ್ಲಿ ಇಂತಹ ಸುಮಾರು ೪೭೭ ಮೊಕದ್ದಮೆಗಳನ್ನು ಹೂಡಲಾಗಿದ್ದು ಅವು ಹಸಿರು ಉರುವಲು ಕಟ್ಟಿಗೆ ಮತ್ತು ನಾಟಾದ ಅಕ್ರಮ ಸಾಗಣೆಕೆಗೆ ಸಂಬಂಧಪಟ್ಟದ್ದಾಗಿರುತ್ತವೆ. ಮತ್ತು ಈ ವಿಷಯದಲ್ಲಿ ೪೮ ಜನರನ್ನು ಬಂಧಿಸಿದ್ದು ಅವರನ್ನು ನ್ಯಾಯಾಲಯದ ಮುಂದೆ ಹಾಜರ್‌ಪಡಿಸಲಾಗಿದೆ.

ಕೆಲವು ಸಂದರ್ಭಗಳಲ್ಲಿ ತಮ್ಮ ಕರ್ತವ್ಯ ನಿರ್ವಹಿಸಿದ ಅರಣ್ಯಾಧಿಕಾರಿಗಳ ಮೇಲೆ ಕೈ ಮಾಡಿದ ಅಕ್ರಮ ಸಾಗಾಣಿಕೆದಾರರ ವಿರುದ್ಧ ಪೋಲೀಸರಿಗೆ ದೂರು ನೀಡಲಾಗಿದೆ.

ಸಿಸ್ಸಿಯ ಟೌನಿನಲ್ಲಿ ಅರಣ್ಯ ಇಲಾಖೆಯ ವತಿಯಿಂದ ನಾಲ್ಕು ಉರುವಲು ಕಟ್ಟಿಗೆಗಳ ಡಿಪೋಗಳು ನಡೆಸಲ್ಪಡುತ್ತಿದ್ದು, ಪ್ರತಿವರ್ಷವೂ ಸುಮಾರು ೧೬, ೦೦೦ ದಿಂದ ೨೦, ೦೦೦ ಘನ ಮೀಟರ್‌ಗಳಷ್ಟು ಉರುವಲು ಕಟ್ಟಿಗೆಯನ್ನು ಟನ್ನಿಗೆ ೪೦ ರೂಗಳಂತೆ ಸಾರ್ವಜನಿಕರ ಬಳಕೆಗೆ ಮಾರಲಾಗುತ್ತಿದೆ. ಅಕ್ರಮ ಕಡಿತ ಮತ್ತು ಕಳ್ಳ ಸಾಗಾಣಿಕೆಯ ವಿರುದ್ಧ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಿರಸಿಯವರು ಕೈಗೊಂಡ ಉಗ್ರಕ್ರಮಗಳಿಂದಾಗಿ ಅಂತಹ ಪ್ರಕರಣಗಳು ಬಹಳಷ್ಟು ಕಡಿಮೆಯಾಗಿದೆ. ಸಾರ್ವಜನಿಕರಿಗೆ ಒಣಗಿದ ಹಾಗೂ ಬಿದ್ದ ಉರುವಲು ಕಟ್ಟಿಗೆಗಳನ್ನು ಮಾತ್ರ ಕಾಡಿನಿಂದ ಹೊರಕ್ಕೆ ತರುವಂತೆ ತಿಳುವಳಿಕೆ ನೀಡಲಾಗಿದ್ದು, ಈ ಬಗ್ಗೆ ಅರಣ್ಯ ಇಲಾಖೆಯವರು ಯಾರಿಗೂ ಯಾವ ವಿಧವಾದ ಕಿರುಕುಳವನ್ನೂ ಕೊಟ್ಟಿರುವುದಿಲ್ಲ,

ಶ್ರೀ ಜಿ.ಎಮ್. ಕಾನಡೆ.—ನನ್ನದು ಒಂದು ಕ್ಲಾರಿಫಿಕೇಷನ್ ಇದೆ. ಮರಗಳನ್ನು ಕಡಿಯಲು ಪಟ್ಟಣದವರಿಗೆ ಕೊಟ್ಟಿದ್ದಾರೆ. ಹಳ್ಳಿಯವರು ಏನು ಮಾಡಬೇಕು ?

ಅಧ್ಯಕ್ಷರು.—ಸಿಸಿಳನೇ ನಿಯಮದ ಕೆಳಗೆ ಅದಕ್ಕೆ ಅವಕಾಶ ಇಲ್ಲ. ಈಗ ಶ್ರೀ ವಸಂತಬಂಗೇರ, ಅವರು ಸಿಸಿಳರ ವಿಚಾರವನ್ನು ಪ್ರಸ್ತಾಪಿಸುವುದು.

ಶ್ರೀ ಜಿ.ಎಮ್. ಕಾನಡೆ. —ಒಂದೇ ಒಂದು ನಿಮಿಷ.

ಅಧ್ಯಕ್ಷರು.—ಇಲ್ಲ, ಇನ್ನು ೨೧ ಸದಸ್ಯರು ನೋಟೀಸ್ ಕೊಟ್ಟಿದ್ದಾರೆ. ಮತ್ತೆ, ಈಗಾಗಲೇ ಶ್ರೀ ವಸಂತ ಬಂಗೇರಾ ರವರನ್ನು ಕರೆದಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಸಭಾಧ್ಯಕ್ಷರೇ, ಈ ವಿಚಾರ ನನಗೂ ಕೂಡ ಗೊತ್ತಿದೆ. ಈ ವಿಚಾರದಲ್ಲಿ ಸುಮಾರು ೫೦-೬೦ ಜನರು ಬಂದು ನನ್ನನ್ನು ಭೇಟಿ ಮಾಡಿದರು. ಅಲ್ಲಿರತಕ್ಕಂಥ ಡಿ.ಎಫ್.ಒ. ಮೇಲೆ ವೈಯಕ್ತಿಕವಾಗಿ ನಮಗೆ ಯಾವ ದ್ವೇಷವೂ ಇಲ್ಲ. ಆದರೆ, ಸೈಕಲ್ ಮೇಲೆ ಒಣ ಕಟ್ಟಿಗೆಯನ್ನು ಇಟ್ಟುಕೊಂಡು ಮಾರಾಟ ಮಾಡತಕ್ಕಂಥ ಬಡವರನ್ನು ಸಿಕ್ಕಾಪಟ್ಟೆ ಹೊಡೆದು ಲಾರಿಗಳಿಗೆ ತುಂಬಿದ್ದಾರೆ. ಅಲ್ಲಿ ಡೆಮಾನ್‌ಸ್ಟ್ರೇಷನ್ ಕೂಡ ನಡೆದಿದೆ, ಇದು ಚುನಾವಣೆ ದಿವಸವೇ ನಡೆದಿದೆ. ಡಿ.ಎಫ್.ಒ. ಅನ್ನು ಕಂಟ್ರೋಲ್ ಮಾಡಿ, ಜನರಿಗೆ ತೊಂದರೆ ಮಾಡದ ರೀತಿಯಲ್ಲಿ ನೀವು ನೋಡಿಕೊಳ್ಳುವುದಾದರೆ, ಅವರು ಅಲ್ಲಿಯೇ ಇರಲಿ. ಆದರೆ, ಇದೇ ರೀತಿ ಡಿ.ಎಫ್.ಒ. ಅವರ ವರ್ತನೆ ಮುಂದುವರಿದರೆ ಜನರಿಗೆ, ಅದರಲ್ಲೂ ಬಡ ರೈತರಿಗೆ, ಬಹಳ ತೊಂದರೆ ಆಗುತ್ತದೆ. ನಾಳೆ ಸರ್ಕಾರದವರೇ ತೊಂದರೆಗೆ ಸಿಕ್ಕಿ ಹಾಕಿಕೊಳ್ಳಬಹುದು. ಆದ್ದರಿಂದ ಅಂಥಹವರನ್ನು ಬದಲಾವಣೆ ಮಾಡುವುದು ಒಳ್ಳೆಯದು. ಪ್ರಾಮಾಣಿಕವಾದ ಅಫೀಸರನ್ನು ಅಲ್ಲಿಗೆ ಹಾಕಿ.

ಅಧ್ಯಕ್ಷರು.—ಸರ್ಕಾರದವರು ಸೂಕ್ತ ಕ್ರಮ ತೆಗೆದುಕೊಳ್ಳಲಿ.

ಶ್ರೀ ಬಿ.ಎ. ಜೀವಿಜಯ.—ಅಧ್ಯಕ್ಷರೇ, ಕೆಲಸ ಮಾಡುತ್ತಿರುವ ಅಧಿಕಾರಿ ಬಹಳ ದಕ್ಷ ಅಧಿಕಾರಿ. ಅವರು ರೈತರಿಗೆ ಏನಾದರೂ ಕಿರುಕುಳ ಕೊಟ್ಟಿದ್ದರೆ, ಅದನ್ನು ವಿಚಾರಣೆ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಇದರಲ್ಲಿ ಹೇಳತಕ್ಕ ವಿಚಾರಗಳು ತುಂಬಾ ಇದೆ. ಆದರೆ ಅದನ್ನು ಇಲ್ಲಿ ಪ್ರಸ್ತಾಪ ಮಾಡಲು ಇಚ್ಛಿಸುವುದಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಸಲಹೆಯನ್ನು ಕೊಟ್ಟಿದ್ದಾರೆ, ಅದರ ಬಗ್ಗೆ ಸೂಕ್ತ ಗಮನ ಕೊಡುತ್ತೇನೆ.

iii) ದ.ಕ. ಜಿಲ್ಲೆಯ ರೈತರು ಅಕ್ಕಿಯನ್ನು ಹಲ್ ಮಾಡುವಾಗ ಕಮರ್ಶಿಯಲ್ ಟ್ಯಾಕ್ಸ್ ಅಧಿಕಾರಿಗಳಿಂದ ಕಿರುಕುಳ.

ಶ್ರೀ ವಸಂತ ಬಂಗೇರ.—ಸನ್ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೈತರು ಬೆಳೆಸಿದ ಬತ್ತವನ್ನು ಹಲ್ ಮಾಡಿ ಅಕ್ಕಿಯನ್ನು ಬಡ ರೈತರು ಉಪಯೋಗ ಮಾಡುತ್ತಿದ್ದಾರೆ. ಹಿಂದೆ ಈ ರೀತಿ ಮಾಡಬೇಕಾದರೆ ರಿಜಿಸ್ಟರ್ ಮಾಡಬೇಕಿತ್ತು. ಕಮರ್ಷಿಯಲ್ ಟ್ಯಾಕ್ಸ್ ಆಫೀಸಿನಲ್ಲಿ ವರ್ಷಕೊಂದು ಸಲ ೨೦೦ ರೂ. ಕಟ್ಟಿ ರಿಜಿಸ್ಟ್ರೇಷನ್ ಮಾಡಬೇಕು. ರೈತರು ತಮ್ಮ ಸ್ವಂತ ಉಪಯೋಗಕ್ಕಾಗಿ ಭತ್ತವನ್ನು ಹಲ್ ಮಾಡಿ ಅಕ್ಕಿಯನ್ನು ಉಪಯೋಗಿಸುತ್ತಿದ್ದಾರೆ. ಅವರು ಪ್ರತಿ ವರ್ಷ ೨೦೦ ರೂ. ಕಟ್ಟಿ ರಿಜಿಸ್ಟರ್ ಮಾಡಿಸಬೇಕು, ಮತ್ತು ಪ್ರತಿ ವರ್ಷ ಕಮರ್ಷಿಯಲ್ ಟ್ಯಾಕ್ಸ್ ಆಫೀಸಿಗೆ ಅಕೌಂಟ್ ಸಬ್‌ಮಿಟ್ ಮಾಡಬೇಕು. ಆದುದರಿಂದ ರೈತರು ಹಲ್ಲರ್ ಅನ್ನು ಉಪಯೋಗಿಸಲು ಸಾಧ್ಯವಾಗದಂಥಹ ಪರಿಸ್ಥಿತಿ ನಿರ್ಮಾಣವಾಗಿದೆ. ಕಮರ್ಷಿಯಲ್ ಟ್ಯಾಕ್ಸ್ ಆಫೀಸಿನವರು ಬಲವಂತವಾಗಿ ರೈತರಿಂದ ೨೦೦ ರೂ. ವಸೂಲು ಮಾಡಿ ರಿಜಿಸ್ಟರ್ ಮಾಡಿಸಿಕೊಳ್ಳುತ್ತಿದ್ದಾರೆ. ರೈತರ ಮೇಲೆ ಅಗತಕ್ಕಂಥ ದಬ್ಬಾಳಿಕೆಯನ್ನು ನಿಲ್ಲಿಸಬೇಕು. ಇದಕ್ಕೆ ಸಂಬಂಧಪಟ್ಟ ಸಚಿವರು ಸೂಕ್ತ ಪರಿಹಾರ ಕೊಡಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣೆಪ್ಪ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು).—ರೈತರು ಉಪಯೋಗಿಸತಕ್ಕಂಥ ಭತ್ತವನ್ನು ಹಲ್ ಮಾಡಿದರೆ, ಅದು ಸೇಲ್ಸ್ ಟ್ಯಾಕ್ಸ್‌ಗೆ ಒಳಪಡುವುದಿಲ್ಲ. ಹಾಗೆ ರೈತರು ಉಪಯೋಗಿಸತಕ್ಕಂಥ ಭತ್ತ ಏನಿದೆ, ಅದು ಸೇಲ್ಸ್ ಟ್ಯಾಕ್ಸ್‌ಗೆ ಒಳಪಡದಂತೆ ನೋಡಿಕೊಳ್ಳಲು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

iv) ತರಿಕೆರೆಗೆ ನೀರಿನ ತೊಂದರೆ ನೀಗಿಸಲು ತಕ್ಷಣ ಕ್ರಮ ಕೈಗೊಳ್ಳುವ ಬಗ್ಗೆ

ಶ್ರೀ ಬಿ.ಆರ್. ನೀಲಕಂಠಪ್ಪ.—ಸನ್ಮಾನ್ಯ ಅಧ್ಯಕ್ಷರೆ, ತರೀಕೆರೆ ತಾಲ್ಲೂಕಿನಲ್ಲಿ ಲಕ್ಕವಳ್ಳಿ ಜಲಾಶಯ ಇದೆ. ಅದು ಪೂರ್ಣವಾಗಿ ಉಪಯೋಗ ಆಗುತ್ತಿಲ್ಲ. ಅದೇ ರೀತಿ ನಮ್ಮ ತಾಲ್ಲೂಕಿನಲ್ಲಿ ಜಲಂದನ ಹಳ್ಳಿ ಜಲಾಶಯ ಇದೆ. ನಮಗೆ ನೀರಿನ ತೊಂದರೆ ಆಗಿರುವುದರಿಂದ ಈ ಕೂಡಲೇ ಪ್ರಾರಂಭಿಸಲು ಈ ವರ್ಷದ ಬಜೆಟ್ಟಿನಲ್ಲಿಯೇ ಸೇರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೇ, ಜಲಂದನಹಳ್ಳಿ ಜಲಾಶಯ ಟೋಟಲ್ ಆಗಿ ಫೈಲ್ಯೂರ್ ಆಗಿದೆ. ಎಷ್ಟು ನೀರನ್ನು ಸಂಗ್ರಹಣೆ